ಅಧ್ಯಕ್ಷರು : ಈಗತಾನೆ ನೀವು ನನ್ನ ಗಮನಕ್ಕೆ ತಂದಿದ್ದೀರಿ, ಈಗಲೇ ವಿಷಯ ಪ್ರಸ್ತಾಪಿಸಬೇಕೆಂದರೆ ಕಷ್ಟವಾಗುತ್ತದೆ. ಒಂದು ಗಂಟೆ ಮುಂಚೆ ಬಂದು ಹೇಳಿದ್ದರೆ, ನಿಮಗೆ ಅವಕಾಶ ಕೊಡತ್ತಿದ್ದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಅವರು ಅಮರಣಾಂತ ಉಪವಾಸ ಮಾಡುತ್ತಿದ್ದಾರೆ. ನಾಳೆ ತೆಗೆದುಕೊಳ್ಳಲು ಅವಕಾಶ ಕೊಡಿ.

2. <u>ಸರ್ಕಾರಿ ಸಮಾರಂಭಗಳಿಗೆ ಆಯಾ ಕ್ಷೇತ್ರಗಳ ಶಾಸಕರುಗಳಿಗೆ ಆಮಂತ್ರಣ.</u>

* ಶ್ರೀ ಆರ್.ಎನ್.ನಾಯಕ್ : ಕರ್ನಾಟಕ ರಾಜ್ಯದಲ್ಲಿ ಯಾವುದೇ ಒಂದು ಶಾಸನಾಸಭೆ ಕ್ಷೇತ್ರದಲ್ಲಿ ಸರ್ಕಾರ ಅಥವಾ ಸರ್ಕಾರದ ಅಂಗ ಸಂಸ್ಥೆಗಳ ವತಿಯಿಂದ ಯಾವುದೇ ಕಾರ್ಯಕ್ರಮ ನಡೆದರೆ ಆಯಾ ಶಾಸನಸಬೆ ಕ್ಷೇತ್ರವನ್ನು ಪ್ರತಿನಿಧಿಸುತ್ತಿರುವ ಶಾಸಕರನ್ನು ಆ ಸಮಾರಂಭಕ್ಕೆ ಅಧ್ಯಕ್ಷರನ್ನಾಗಿ ಅಥವಾ ಬೇರೆ ರೂಪದಲ್ಲಿ ಅವರಿಗೆ ಅವಕಾಶ ಮಾಡಬೇಕೆಂಬ ರೂಲ್ಸ್‌ಇದೆ. ಸರ್ಕಾರದ ಖರ್ಚಿನಲ್ಲಿ ಈ ಸಮಾರಂಭಗಳು ನಡೆಯುತ್ತಿರುವುದರಿಂದ ಈ ರೀತಿ ಮಾಡಬೇಕೆಂದು ನಿಯಮ ಇದೆ. ನಾನು 1983 ರಲ್ಲಿ ಈ ಪ್ರಶ್ನೆ ಕೇಳಿದಾಗ ಆಗಿನ ಮುಖ್ಯ ಮಂತ್ರಿಗಳಾದ ಶ್ರೀ ರಾಮಕೃಷ್ಣ ಹೆಗಡೆ ಈ ರೀತಿ ಉತ್ತರ ಕೊಟ್ಟಿದ್ದರು.
ಹಾಗೆಯೇ ನಮ್ಮ ಕ್ಷೇತ್ರಕ್ಕೆ ಬಂದಾಗಲೂ ಸಹ ನಾನೇ ಹೋಗಬಾರದು ಎಂದು ದೂರ ನಿಂತರೂ ಸಹ ನನ್ನನ್ನು ಕರೆದು ಮುಂದೆ ಕೂರಿಸಿಕೊಂಡು ಫಂಕ್ಷನ್ ಮಾಡಿದರು. ಆಗ ನಾನು ವಿರೋಧ ಪಕ್ಷದಲ್ಲಿದ್ದೆ. ಆದರೆ ಈಗ ಏನಾಗಿದೆಯೆಂದರೆ ಹೊನ್ನಾವರ ತಾಲ್ಲೂಕಿನಲ್ಲಿ ಲಲಿತಾಕಲಾ ಅಕಾಡೆಮಿಯವರು ಒಂದು ಫಂಕ್ಷನ್ ಮಾಡುತ್ತಿದ್ದಾರೆ. ಅದು ಬರುವ 7 ನೇ ತಾರಿಖು ರವಿವಾರದ ದಿವಸ ಇದೆ. ನಮ್ಮ ಹೊನ್ನಾವಾರ ತಾಲ್ಲೂಕಿನ 2-3 ರಷ್ಟು ಭಾಗವನ್ನು ನಾನೂ ಹಾಗೂ 1 ರಷ್ಟು ಭಾಗವನ್ನು ಕೆ.ಹೆಚ್. ಗೌಡರು, ಅಲ್ಲಿ ಪ್ರತಿನಿಧಿಸುತ್ತಿದ್ದೇವೆ. ಇಂತಹ ಸಂದರ್ಭದಲ್ಲಿ ನಮಗೆ ಒಂದು ಆಹ್ವಾನಪತ್ರಿಕೆ ಬಂದಿಲ್ಲ. ಇದರ ಜೊತೆಗೆ ನಾವು ಅಲ್ಲಿ ಅಧ್ಯಕ್ಷರೂ ಆಗಿಲ್ಲ,ಮುಖ್ಯ ಅತಿಥಿಗಳು ಆಗಿಲ್ಲ. ಈಗ ನಮ್ಮ ಸಮಸ್ಯೆಯೇನೆಂದರೆ, ವಯಸ್ಕರ ಶಿಕ್ಷಣ ಮಂತ್ರಿಗಳಾದ ನಮ್ಮ ಮಿತ್ರ ಮಾನ್ಯ ರಾಣೆಯವರು ಆ ದಿವಸ ಅಲ್ಲಿಗೆ ಬರುತ್ತಿದ್ದಾರೆ. ಅವರು ಬಂದಮೇಲೆ ನಮಗೆ ಆ ಸಭೆಗೆ ಹೋಗದೆ ಇರುವುದಕ್ಕೆ ಆಗುವುದಿಲ್ಲ. ಆ ಸಭೆಗೆ ಹೋದರೂ ನಾವು ಅಲ್ಲಿ ಎಲ್ಲಿ ಕುಳಿತುಕೊಳ್ಳಬೇಕು. ನಾವು ಪ್ರೇಕ್ಷಕರಾಗಬೇಕೇ ಅಥವಾ ಡಯಸ್ ಮೇಲೆ ಹೋಗಬೇಕೆ ಎನ್ನುವ ಸಮಸ್ಯೆ ಎದುರಾಗಿದೆ. ಇದು ಸ್ವಲ್ಪ ನಮ್ಮ ಕಾನೂನು ಮತ್ತು ಆತ್ಮಗೌರವದ ಪ್ರಶ್ನೆ ಆಗಿರುತ್ತದೆ . ಈ ರೀತಿ ಸಮಸ್ಯೆಯಾಗಿದೆ ಎಂದು ಅಲ್ಲಿ ಬಹಳ ಜನ ಹೇಳಿದರು. ವಿರೋಧ ಪಕ್ಷದಲ್ಲೇ ಇರಲಿ ಅಥವಾ ಆಳುವ ಪಕ್ಷದಲ್ಲೇ ಇರಲಿ ಅವರವರನ್ನು ಕರೆದು ಅಲ್ಲಿ ಗೌರವ ಕೊಟ್ಟು ಸಮಾರಂಭ ಮಾಡಬೇಕೆಂಬ ತೀರ್ಮಾನ ಮಾಡುವುದು ಬೇಕಿಲ್ಲ. ಬಹುಶ : ಇದು ಜನತಾ ದಳದ ಸರ್ಕಾರ ಇದ್ದಾಗಲೇ ಮಾಡಿದ್ದುದೋ ಅಥವಾ ಅದಕ್ಕೂ ಹಿಂದೆ ಮಾಡಿರಬಹುದೇನೋ ಗೊತ್ತಿಲ್ಲ. ಹಾಗಿದ್ದಾಗ ಕಾನೂನು ರೀತ್ಯ ನಡೆದುಕೊಳ್ಳುವುದಕ್ಕೆ ಏನು ತೊಂದರೆ ಇದೆ. ಈಗ ಇಲ್ಲಿ ನಮ್ಮ ಕಾನೂನು ಮಂತ್ರಿಗಳು ಇದ್ದಾರೆ ಅವರು ನನಗೆ ಎಲ್ಲಿ ಕುಳಿತುಕೊಳ್ಳಬೇಕು ಎಂದು ಹೇಳಬೇಕು. ಡಯಸ್ ಮೇಲೆ ಹೋಗಬೇಕೇ ಅಥವಾ ಕೆಳಗಡೆ ಕುರ್ಚಿ ಮೇಲೆ ಕುಳಿತು ಪ್ರೇಕ್ಷಕರಾಗಬೇಕೆ, ಅಥವಾ ಆಜ್ಞೆಗೆ ನಿಲ್ಲಬೇಕೇ ಅಥವಾ ಹೋಗಲೇಬಾರದೇ ಎನ್ನುವುದನ್ನು ತಿಳಿಸಿಬಿಟ್ಟರೆ ನನಗೆ ಸಂತೋಷವಾಗುತ್ತದೆ.

* ಶ್ರೀ ವಾಟಾಳ್ ನಾಗರಾಜ್ : ಸನ್ಮಾನ್ಯ ಸಭಾಧ್ಯಕ್ಷರೇ, 4 ದಿವಸದಿಂದ ತಮ್ಮ ಗಮನಕ್ಕೆ ತರುತ್ತಿದ್ದೇನೆ. ನಮ್ಮ ಸಂಸಧೀಯ ಸಚಿವರ ಗಮನಕ್ಕೂ ಸಹ ತಂದಿದ್ದೇನೆ. ಈಗ ಸರ್ಕಾರಿ ಸಮಾರಂಭಗಳು ಯಾವುದೇ ತಾಲ್ಲೂಕುಗಳಲ್ಲಿ ನಡೆದರೆ, ಅವರು ಯಾವುದೇ ಪಕ್ಷದವರಾಗಲಿ, ಶಾಸಕರೇ ಅಧ್ಯಕ್ಷತೆ ವಹಿಸಬೇಕು ಎನ್ನುವುದು ಒಂದು ಸಂಪ್ರದಾಯ ಮತ್ತು ನಿರ್ಣಯ. ಇದು ಈ ಸಭೆಯಲ್ಲಿ ಹಿಂದಿನಿಂದಲೂ ನಡೆದುಕೊಂಡು ಬಂದಿರುತ್ತದೆ. ಅವರನ್ನು ಬಿಟ್ಟು ಯಾವುದೇ ಸಮಾರಂಭವನ್ನು ಮಾಡಬಾರದು. ಅವರು ಕಾಂಗ್ರೆಸಿನವರೇ ಇರಲಿ, ಯಾವುದೇ ಪಕ್ಷದವರು ಇರಲಿ, ಇದು ಒಂದು ಸರ್ವ ಸಮ್ಮತವಾದಂಥ ತೀರ್ಮಾನವಾಗಿದೆ. ಇದರ ಜೊತೆಗೆ ಅನೇಕ ಕಡೆ ಶಾಸಕರು ಇದ್ದರೆ ಅವರಿಗೆ ಆಹ್ವಾನಪತ್ರಿಕೆ ಕೊಡದೇ ಅವರನ್ನು ಕೇಳತಕ್ಕಂತಹ ಸೌಜನ್ಯವನ್ನು ಮಾಡದೇ ತಮ್ಮ ಇಚ್ಛೆ ಬಂದ ಹಾಗೆ ಸಮಾರಂಭಗಳು ಇತ್ತೀಚಿನ ದಿನಗಳಲ್ಲಿ ನಡೆಯುತ್ತಿದೆ. ಮೊನ್ನೆ ನಮ್ಮ ನಾರಾಯಣ ಸ್ವಾಮಿ ಅವರ ಕ್ಷೇತ್ರವಾದ ಬೇತಮಂಗಲದಲ್ಲಿ ಶಾಸಕರನ್ನು ಹೊರಗೆ ಹಾಕಿ ಸರ್ಕಾರಿ ಸಮಾರಂಭವನ್ನು ತಾವೇ ತಮ್ಮ ಇಚ್ಛೆ ಬಂದವರೇ ಮಾಡಿಕೊಂಡು ಹೋಗಿದ್ದಾರೆ. ಈ ಸರ್ಕಾರದ ಒಬ್ಬ ಸಚಿವರು ಹೇಳಿದ್ದಾರೆ, ಅದು ನಿಯಮವೇನೂ ಇಲ್ಲ. ನಿಯಮವನ್ನೆಲ್ಲಾ ಗಾಳಿಗೆ ತೂರಿದ್ದೇವೆ. ಇದರ ಬಗ್ಗೆ ನೀವು ಏನೂ ಚಕಾರ ಎತ್ತ ಬೇಕಾಗಿಲ್ಲ. ನಾವು ಯಾರು ಯಾವ ಗಳಿಗೆಯಲ್ಲಿ ಏನು ಬೇಕಾದರೂ ಮಾಡಬಹುದು. ಈ ನಿಯಮ ಇರುವುದು ಸುಮ್ಮನೆ, ನಮಗೋಸ್ಕರ ಅಲ್ಲ ಎನ್ನುವ ಒಂದು ಅಪ್ಪಣೆಯನ್ನು ಕೊಡಿಸಿದ್ದಾರೆ. ನಿಯಮಗಳನ್ನೆಲ್ಲಾ ಗಾಳಿಗೆ ತೂರೋಣ ಎಂದು ಪ್ರಜಾವಾಣಿ ಪತ್ರಿಕೆಯಲ್ಲಿ ಒಂದು ದೊಡ್ಡ ಲೇಖನವೇ ಬಂದಿದೆ. ಅಧ್ಯಕ್ಷರೇ ಈ ವಿಷಯವನ್ನು ನಾನು ತಮಗೆ ಬಹಳ ನೊಂದ ಮನಸ್ಸಿನಿಂದ ಹೇಳುತ್ತಿದ್ದೇನೆ. ನಮ್ಮ ಕ್ಷೇತ್ರದಲ್ಲಿ ಅಂಡರ್‌ಕಳ್ಳಿ ಎಂದು ಒಂದು ಹಳ್ಳಿ ಇದೆ. ಈ ಹಳ್ಳಿಯಲ್ಲಿ ಸರ್ಕಾರಿ ಸಮಾರಂಭಕ್ಕೆ ಮಾನ್ಯ ರಾಜಶೇಖರ್ ಮೂರ್ತಿಯವರನ್ನು ಬರಬೇಕು ಎಂದು ಅಲ್ಲಿನ ಜನ ಮತ್ತು ನಾವು ಕರೆದಿದ್ದೆವು. ಅವರ ಬಗ್ಗೆ ನನಗೆ ಬಹಳ ಗೌರವ ಇದೆ, ಒಳ್ಳೆಯ ವ್ಯಕ್ತಿತ್ವ ಇರುವವರು. ಇವರು ಬರುತ್ತೇವೆ ಎಂದು ಒಪ್ಪಿಕೊಂಡರು. ಆಹ್ವಾನ ಪತ್ರಿಕೆಯಲ್ಲಿ ಹೆಸರು ಮುದ್ರಣವಾಯಿತು. ನಾನು ಅನೇಕ ಸಲ ನಮ್ಮ ಜನಗಳಿಗೆ ಹೇಳುತ್ತಿರುತ್ತೇನೆ. ಮಂತ್ರಿಗಳನ್ನು ಕರೆಯಬೇಡಿ, ಕೊನೇ ಗಳಿಗೆಯಲ್ಲಿ ಅವರು ಹೆಚ್ಚುಕಡಿಮೆ ಮಾಡಿಬಿಡುತ್ತಾರೆ ಎಂದು. ಆದರೆ ಜನರಿಗೆ ಸ್ವಲ್ಪ ಕರೆಯಬೇಕು ಎಂದು ಹುಚ್ಚು ಇರುತ್ತದೆ, ಕರೆಯಲಿ. ಅದಕ್ಕೆ ನಮ್ಮದೇನೂ ಅಭ್ಯಂತರ ಇಲ್ಲ. ನಾನಂತೂ ನೂರಕ್ಕೆ 90 ಭಾಗ ಕರೆಯುವುದಕ್ಕೆ ಹೋಗುವುದಿಲ್ಲ. ನಮ್ಮ ಕ್ಷೇತ್ರಕ್ಕೆ ಅವರು ಬರುವುದು ಇಲ್ಲ ಅದು ಬೇರೆ ವಿಚಾರ. ಮಾನ್ಯ ಅಧ್ಯಕ್ಷರೇ, ನಾನು ತಮಗೆ ಹೇಳುತ್ತಿದ್ದೇನೆ. ಮಾನ್ಯ ರಾಜಶೇಖರ್ ಮೂರ್ತಿಯವರಿಗೆ ಕೊನೇಗಳಿಗೆಯಲ್ಲಿ ಅಲ್ಲಿನ ತಾಲ್ಲೂಕಿನ ಕಾಂಗ್ರೆಸ್ಸಿನ ಅಧ್ಯಕ್ಷರು, ನೀವು ಬರಕೂಡದು, ಇದು ನಮ್ಮ ಅಪ್ಪಣೆ, ನೀವು ಬರುವುದಾದರೆ, ನಿಮ್ಮ ವಿರುದ್ಧ ತಿರುಗಿ ಬೀಳುತ್ತೇವೆ, ನಿಮ್ಮ ಮನೆ ಮುಂದೆ ಸತ್ಯಾಗ್ರಹ ಮಾಡುತ್ತೇವೆ, ನಿಮಗೆ ಎಚ್ಚರಿಕೆ ಕೊಡುತ್ತೇವೆ, ಈ ರೀತಿಯಾದಂಥ ಗೊಂದಲಕ್ಕೆ ಬಂತು. ಮಾನ್ಯ ರಾಜಶೇಖರ್ ಮೂರ್ತಿಯವರು ನನಗೆ ಒಂದು ದಿನ ಫೋನ್ ಮಾಡಿ ವಾಟಾಳ್‌ರವರೇ ನನ್ನದು ಈ ರೀತಿಯಾದ ಪರಿಸ್ಥಿತಿಯಾಗಿದೆ. ತಾವು ದಯಮಾಡಿ ನನ್ನ ಸಹಾಯಕ್ಕೆ ಬರಬೇಕು, ಎಂದು ಕೇಳಿದರು. ಹೇಗೆ ನಿಮ್ಮ ಸಹಾಯಕ್ಕೆ ಬರಬೇಕೆಂದಾಗ ನಾನು ಬರುವುದನ್ನು ತಡೆಹಿಡಿಯಿರಿ, ತಪ್ಪು ತಿಳಿಯಬೇಡಿ ಎಂದರು. ಅದಕ್ಕೆ ನಾನು ಆಯಿತು ಎಂದು, ನೀವು ಈ ರೀತಿಯ ಕಷ್ಟ ಸಂಕಟದಲ್ಲಿ ಸಿಕ್ಕಿದ್ದರೆ ಬರುವುದು ಬೇಡ ನಾನೇ ಹೋಗಿ ಸಮಾರಂಭ ಮಾಡುತ್ತೇನೆ ಎಂದೆ. ಸಮಾರಂಭ ಮಾಡಿದ್ದು ಆಯಿತು. ಅದಕ್ಕೆ ನಾನು ಮಾನ್ಯ ಸಂಸಧೀಯ ಸಚಿವರಿಗೆ ಹೇಳುತ್ತೇನೆ ನಿಮ್ಮ ತಾಲ್ಲೂಕಿನ ಕಾಂಗ್ರೆಸ್ಸಿನವರು ಇರಬಹುದು, ಅಥವಾ ಬೇರೆಯವರು ಇರಬಹುದು ಸರ್ಕಾರಿ ಸಮಾರಂಭಕ್ಕೆ ಯಾರು ಶಾಸಕರು ಇದ್ದಾರೆ ಅವರು ಅಧ್ಯಕ್ಷತೆ ವಹಿಸಬೇಕು, ಮತ್ತು ಮಂತ್ರಿಗಳಾದಂತಹವರು ಅಲ್ಲಿ ಸಮಾರಂಭ ಉದ್ಘಾಟನೆ ಮತ್ತು ಮುಖ್ಯ ಅತಿಥಿಗಳಾಗಿ ಇರಬೇಕು ಎನ್ನುವುದು ಒಂದು ಸಂಪ್ರದಾಯ. ಅದು ಸಂಪ್ರದಾಯ ಮತ್ತು ಈ ಸದನದಲ್ಲಿ ಆಗಿರತಕ್ಕಂಥ ತೀರ್ಮಾನ. ಇದೂ ಅಲ್ಲದೆ ನಾವು ಅಲ್ಲಿ ಕಾಂಗ್ರೇಸ್, ಅಧ್ಯಕ್ಷರನ್ನು ಆಹ್ವಾನಪತ್ರಿಕೆಯಲ್ಲಿ ಸೇರಿಸಬೇಕು ಎಂದು ಹೇಳುತ್ತಿದ್ದಾರೆ. ನಮ್ಮ

ಹೆಸರು ಸೇರಿಸಲಿಲ್ಲ ಎಂದರೆ ಮಂತ್ರಿಗಳು ಬರಬಾರದು ಎಂದು. ಹಾಗಾದರೆ ಕಾಂಗ್ರೆಸ್, ಅಧ್ಯಕ್ಷರನ್ನು ಸೇರಿಸಿದರೆ ಕಾಂಗ್ರೆಸ್ ಜನತಾದಳ, ಬಿಜೆಪಿ, ಕನ್ನಡ ಚಳುವಳಿ, ಕಮ್ಯೂನಿಸ್ಟ್ ಎಲ್ಲರನ್ನೂ ಸೇರಿಸಿ ಎಂದು ಈ ಸದನದಲ್ಲಿ ತೀರ್ಮಾನ ತೆಗೆದುಕೊಳ್ಳಿ. ನಮ್ಮದೇನೂ, ಅಭ್ಯಂತರವಿಲ್ಲ. ಈ ರೀತಿ ದು ವಿಚಿತ್ರವಾದಂತಹ ಪ್ರಸಂಗ ಎಲ್ಲಾ ಕಡೆ ಆಗಿದೆ. ನಿಜವಾಗಿಯೂ ಇದು ಬಹಳ ನೋವಿನ ಪ್ರಸಂಗ. ಸರಕಾರಿ ಸಮಾರಂಭ ಅಂದರೆ ಅವರು ಯಾವುದೇ ಪಕ್ಷದ ಶಾಸಕರು ಇದ್ದರೂ ಕೂಡ ಅವರು ಅಧ್ಯಕ್ಷತೆ ವಹಿಸಲೇ ಬೇಕು, ಮಂತ್ರಿಗಳು ಉದ್ಘಾಟನೆ ಇತ್ಯಾದಿ ಯಾವುದೇ ಕಾರ್ಯವನ್ನು ಮಾಡಬೇಕು. ಆದ್ದರಿಂದ ಈ ಬಗ್ಗೆ ಸರಕಾರದವರು ಮತ್ತೊಮ್ಮೆ ಸ್ಪಷ್ಟಪಡಿಸಬೇಕೆಂದು ಕೇಳಿಕೊಳ್ಳುತ್ತೇನೆ. ಹಾಗೆಯೇ ಕಾಂಗ್ರೆಸ್‌ನವರು ಯಾರಾದರೂ ಮಂತ್ರಿಗಳು ಬರಬೇಡಿ ಎಂದು ಹೇಳಿದರೆ, ಅವರ ಮಾತುಗಳನ್ನು ಕೇಳಿಕೊಂಡು ನೀವು ಬಾರದೇ ಇರತಕ್ಕಂಥ ಕೆಲಸವನ್ನು ಮಾಡಬೇಡಿ. ನೀವು ಕಾಂಗ್ರೇಸ್ ಮಂತ್ರಿಗಳೇ, ಅಥವಾ ರಾಜ್ಯದ ಮಂತ್ರಿಗಳೇ ಎಂಬುದನ್ನು ಹೇಳಬೇಕು.

ಶ್ರೀ ಯು.ಟಿ.ಶಾಮಣ್ಣ : ಮಾನ್ಯ ಅಧ್ಯಕ್ಷರೇ, ಈಗಾಗಲೇ ನಾಯಕರು ಹೇಳಿದ ಹಾಗೆ ಮಾನ್ಯ ಮಂತ್ರಿಗಳು ಆಗಮಿಸುವ ಸಂದರ್ಭದಲ್ಲಿ ಬಹುಶಃ ಈ ಬಗ್ಗೆ ನಾನು ಕೇಳುವುದು ಸೂಕ್ತವಲ್ಲ ಎಂದು ತಿಳಿದಿದ್ದೆ. ಆದರೆ ಮಾನ್ಯ ಸಂಸದೀಯ ಸಚಿವರು ಇರುವುದರಿಂದ ತಮ್ಮ ಮೂಲಕ ನಾನು ಅವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ, ಮಂತ್ರಿಗಳು ಕ್ಷೇತ್ರಕೆ ಆಗಮಿಸುವ ಸಂದರ್ಭದಲ್ಲಿ ಖಾಸಗಿ ಕಾರ್ಯಕ್ರಮಕ್ಕೆ ಬರಬೇಕಾದಾಗ, ಶಾಸಕರ ಅನುಮತಿ ಬೇಕಾಗಿಲ್ಲ, ಅದು ಅವರ ಹಕ್ಕು . ಹೋಗಿ ಅದರಲ್ಲಿ ಭಾಗವಹಿಸಬಹುದು. ಶಾಸಕರ ಆಹ್ವಾನ ಪತ್ರಿಕೆ ಇಲ್ಲದೇ ಹೋದರೂ ನಾವು ಬರಬಹುದು. ಅದು ಅವರ ಹಕ್ಕಲ್ಲ ಎನ್ನತಕ್ಕಂಥಾದ್ದನ್ನು ನನ್ನ ಅನುಭವಕ್ಕೆ ಈಗಾಗಲೇ ಬಂದಿದೆ. ಮಾನ್ಯ ಸಂಸದೀಯ ಸಚಿವರು ಈ ಬಗ್ಗೆ ಸ್ಪಷ್ಟನೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ : ಇದು ಬಹಳ ಗಂಭೀರವಾದ ಸಮಸ್ಯೆ. ಇದು ಶಾಸಕರ ಅಧಿಕಾರ, ಅದನ್ನು ಯಾರಿಂದಲೂ ಕಸಿದುಕೊಳ್ಳುವುದಕ್ಕೆ ಆಗುವುದಿಲ್ಲ. ಯಾವುದೇ ಸ್ಥಳದಲ್ಲಿ ಸರಕಾರಿ ಸಮಾರಂಭ ನಡೆದಾಗ ಅಲ್ಲಿ ಸ್ಥಳೀಯ ಶಾಸಕನು ಇಲ್ಲವಾದರೆ ಅಲ್ಲಿಗೆ ಹೋಗುವ ಮಂತ್ರಿಗೆ ಅಥವಾ ವಿರೋಧ ಪಕ್ಷದವರಿಗೆ ಅಪಮಾನ ಎಂದು ತಿಳಿದುಕೊಳ್ಳಬೇಕು. ಆ ಭಾಗದ ಶಾಸಕರು ಸಮಾರಂಭದಲ್ಲಿದ್ದರೆ ನಮಗೆ ಅದೊಂದು ಗೌರವ. ನಾವು ಸಚಿವರಿದ್ದಾಗ ಯಾವುದೇ ಫಂಕ್ಷನ್ ಇದ್ದರೆ ಅದಕ್ಕೆ ಅಲ್ಲಿಯ ಶಾಸಕರನ್ನು ಅಧ್ಯಕ್ಷರನ್ನಾಗಿ ಮಾಡುತ್ತಿದ್ದೆವು. ಸಂಕೇಶ್ವರದಲ್ಲಿ ಕುಡಿಯುವ ನೀರಿನ ಯೋಜನೆಯ ಒಂದು ಕಾರ್ಯಕ್ರಮಕ್ಕೆ ನಾವು ಹೋಗಬೇಕಾಗಿತ್ತು. ಅಲ್ಲಿ ಸ್ಥಳೀಯರಲ್ಲಿ ಭಿನ್ನಾಭಿಪ್ರಾಯ ಬಂತು. ಆ ಸಂದರ್ಭದಲ್ಲಿ ನಾನು ಕಾಂಗ್ರೆಸ್ (ಐ) ಸದಸ್ಯರ ಬಗ್ಗೆ ಗೌರವವನ್ನು ತೋರಿಸಿದೆ. ನಮ್ಮ ಸರಕಾರವಿದ್ದಾಗ ಇಂಥ ಪ್ರತಿಯೊಂದು ಸಮಾರಂಭದಲ್ಲಿ ಅಲ್ಲಿಯ ಶಾಸಕರನ್ನು ಇನ್‌ವಾಲ್ವ್ ಮಾಡಬೇಕು, ಶಾಸಕರನ್ನು ಅಧ್ಯಕ್ಷರನ್ನಾಗಿ ಮಾಡಬೇಕು. ನಾನು ಈ ವಿಷಯವನ್ನು ಮುಖ್ಯ ಮಂತ್ರಿಯವರಲ್ಲಿ ಪ್ರಸ್ತಾಪಿಸಿದಾಗ ಅವರು ಇಲ್ಲ, ಹಾಗೆಯೇ ಶಾಸಕರನ್ನು ಇನ್‌ವಾಲ್ವ್ ಮಾಡಬೇಕಾಗುತ್ತದೆ ಎಂದು ಹೇಳಿದರು. ಹಾಗಿದ್ದರೂ ಕೂಡ ಆಗುತ್ತಾ ಇಲ್ಲ. ನಮ್ಮ ಮಾನ್ಯ ಸದಸ್ಯರಾದ ನಾರಾಯಣಸ್ವಾಮಿಯವರು ಬೇತಮಂಗಲದ ಶಾಸಕರು, ಅವರನ್ನು ಪರಿಶಿಷ್ಟ ಜನಾಂಗದ ಶಾಸಕರು ಎಂದು ಬಿಟ್ಟಿದ್ದೀರಾ? ಏತಕ್ಕಾಗಿ ಅವರನ್ನು ಬಿಟ್ಟಿದ್ದೀರಿ? ಅಲ್ಲಿ ಯಾರೋ ಹೇಳಿದರಂತೆ ಯಾರಿವನು ಶಾಸಕ? ಇವನದ್ಯಾವ ಅವಶ್ಯಕತೆ ಇದೆ? ಎಂದು. ಸಮಾರಂಭವನ್ನು ನಮಗೆ ಮನಸ್ಸಿಗೆ ಬಂದ ಹಾಗೆ ನಡೆಸಿಕೊಂಡು ಹೋಗುತ್ತೇವೆ ಎಂದು ಹೇಳಿದ್ದುದು. ಇತ್ಯಾದಿಯಾಗಿ ಪತ್ರಿಕೆಗಳಲ್ಲಿಯೂ ಬಂದಿದೆ. ಇವತ್ತು ಬಜೆಟ್‌ನಲ್ಲಿ ಡೆವಲಪ್‌ಮೆಂಟ್ ವರ್ಕ್ಸ್ ಎಷ್ಟು ಇದೆ ಎಂಬುದನ್ನು ನೋಡಿ. ಇರಿಗೇಷನ್ ಡಿಪಾರ್ಟ್‌ಮೆಂಟಿನವರು ನೋಡಬೇಕು.

ಹಾಗಾಗಿ ಕೇವಲ ಕೆಲವೇ ಜನ ಶಾಸಕರಿಂದಲೇ ನಡೆಯಬೇಕು, ಅಥವಾ ಕೆಲವು ಮಂತ್ರಿಗಳು ಏನು ಹೇಳುತ್ತಾರೆ ಅದರ ಪ್ರಕಾರ ನಡೆದರೆ ಬಹಳ ಕಷ್ಟವಾಗುತ್ತದೆ. ನಾನು ನೇರವಾಗಿ ಯಾವ ಮಂತ್ರಿಗಳ ಮೇಲೆ, ಮುಖ್ಯಮಂತ್ರಿಗಳ ಮೇಲೆ ದೂರು ಮಾಡುತ್ತಾ ಇಲ್ಲ. ಆದರೆ, ಸರಕಾರದ ನೀತಿ ಬಹಳ ಸ್ಪಷ್ಟವಾಗಿ ಇರಬೇಕಾಗುತ್ತದೆ. ಯಾವುದೇ ಕಾರ್ಯಕ್ರಮವಿದ್ದರೂ ಸಹ ಆ ಭಾಗದ ಶಾಸಕರಿಗೆ ತಾವು ಅದರಲ್ಲಿ ಇನ್‌ವಾಲ್ವ್ ಮಾಡಬೇಕಾಗುತ್ತದೆ. ಇಲ್ಲವಾದರೆ ನಾವು ಅಲ್ಲಿ ಬ್ಯಾಕಾಟ್ ಮಾಡುವುದು ಅಷ್ಟೇ ಅಲ್ಲ, ಪೊಟಿಸ್ಟ್ ಕೂಡ ಮಾಡಬೇಕಾಗುತ್ತದೆ. ಅದನ್ನು ಎದುರಿಸುವ ಶಕ್ತಿ ಇದ್ದರೆ ಹೀಗೆ ಮಾಡಿ. ನಾನು ವಿರೋಧ ಪಕ್ಷದ ನಾಯಕನಾಗಿ ಇದ್ದೇನೆ. ಯಾರಾದರೂ ಶಾಸಕರು ನಮ್ಮನ್ನು ಆಹ್ವಾನಿಸಿದರೆ ನಾವು ಅಲ್ಲಿಗೆ ಹೋಗಬೇಕಾಗುತ್ತದೆ. ನನಗೆ ಒಮ್ಮೆ ಒಂದು ಸಮಾರಂಭಕ್ಕೆ ಹೋಗುವುದು ಎಂದು ಫಿಕ್ಸ್ ಆಗಿತ್ತು. ಆದರೆ ನನಗೆ ಹೋಗಲು ಆಗಲಿಲ್ಲ. ಆದರೆ, ನಾನು ಅಲ್ಲಿಯ ಶಾಸಕರಿಗೆ ಗೌರವ ಕೊಟ್ಟು ಫೋನ್‌ನಲ್ಲಿ ಮಾತನಾಡಿ ಕ್ಯಾನ್ಸಲ್ ಮಾಡಿಸಿದೆ. ಈ ತರಹ ಗೌರವವನ್ನು ನಾವು ಶಾಸಕರಿಗೆ ಕೊಡಬೇಕಾಗುತ್ತದೆ. ಹೀಗೆ ಅವರಿಗೆ ಗೌರವ ಸಿಗದಿದ್ದರೆ ಶಾಸಕರಾಗಿ ಅವರು ಏತಕ್ಕೆ ಕೆಲಸ ಮಾಡಬೇಕು? ಹೀಗೆ ಮಾಡಿದ್ದಲ್ಲಿ ಜನರಲ್ಲಿ ಕೂಡ ಅವರ ಬಗ್ಗೆ ಯಾವ ರೀತಿಯ ಭಾವನೆ ಕಲ್ಪನೆಯಾಗಬಹುದು? ಇದರಿಂದ ವಿನಾಕಾರಣ ಕಾಂಟ್ರವರ್ಸಿ ಕ್ರಿಯೆಟ್ ಆಗಬಹುದು. ಆದ್ದರಿಂದ ತಮ್ಮ ಮೂಖಾಂತರ ತಮಗೂ ರಿಕ್ವೆಸ್ಟ್ ಮಾಡಿಕೊಳ್ಳುತ್ತೇನೆ, ಏಕೆಂದರೆ ತಾವುಗಳು ಕೂಡ ಸರಕಾರಕ್ಕೆ ಆದೇಶ ಕೊಡಬೇಕಾಗುತ್ತದೆ. ನಮ್ಮ ನೆರವಿಗೆ ತಾವುಗಳು ಬರಬೇಕಾಗುತ್ತದೆ. ತಾವುಗಳು ಈ ಬಗ್ಗೆ ಸರಿಯಾದ ಒಂದು ಸ್ಪಷ್ಟನೆ ನೀಡಿ ಆದೇಶ ಕೊಡುತ್ತೀರಿ ಎಂಬ ವಿಶ್ವಾಸ ನಮಗೆ ಇದೆ.

(ಗೊಂದಲ)

ಶ್ರೀ ಎಂ.ಮಹದೇವ್ : ಮಾನ್ಯ ಅಧ್ಯಕ್ಷರೇ, ಪ್ರಜಾಪ್ರಭುತ್ವದಲ್ಲಿ ಮಂತ್ರಿಗಳು ಟೂರ್ ಮಾಡಿದರೆ ಶಾಸಕರಿಗೆ ತಿಳಿಸಬೇಕು, ಆಯಾ ಕ್ಷೇತ್ರದಲ್ಲಿ ಶಾಸಕರೇ ಅಧ್ಯಕ್ಷತೆ ವಹಿಸಬೇಕೆಂಬ ವಿಚಾರವನ್ನು ಸ್ವಾಗತಿಸುತ್ತೇನೆ. ಆದರೆ ಜಿಲ್ಲಾಮಟ್ಟದ ಅಧಿಕಾರಿಗಳು ಶಾಸಕರನ್ನು ಗಣನೆಗೆ ತೆಗೆದುಕೊಳ್ಳುವುದಿಲ್ಲ. ಮಂತ್ರಿಗಳನ್ನು ಗಣನೆಗೆ ತೆಗೆದುಕೊಳ್ಳುವುದಿಲ್ಲ, ಯಾವುದಾದರೂ ಉದ್ಘಾಟನೆಗೆ ಅವರೇ ಸರ್ಕಾರಿ ಸಮಾರಂಭಗಳನ್ನು ಮಾಡುತ್ತಿದ್ದಾರೆ. ಇದು ಸರ್ಕಾರದ ನೀತಿಯೇ? ಶಾಸಕರಿಗೆ ಗೊತ್ತೇ ಇರುವುದಿಲ್ಲ.ಅವರೇ ಅಧ್ಯಕ್ಷತೆ ವಹಿಸುತ್ತಾರೆ. ಇಲ್ಲ ಅವರೇ ಉದ್ಘಾಟನೆ ಮಾಡುತ್ತಾರೆ. ಉದಾಹರಣೆಗೆ, 'ಆರಾಧ'ನಾ', 'ವಿಶ್ವ' ಯೋಜನೆ ಕಾರ್ಯಕ್ರಮಗಳನ್ನು ಮೈಸೂರು ಜಿಲ್ಲಾಧಿಕಾರಿ ನಮ್ಮ ಕ್ಷೇತ್ರಗಳಲ್ಲಿ ನಮ್ಮನ್ನು ಬಿಟ್ಟು ಅವರೇ ನೇರವಾಗಿ ಸಮಾರಂಭ ಮಾಡುತ್ತಿದ್ದಾರೆ. ಇದು ಸರ್ಕಾರಿ ಅಧಿಕಾರಿ ಮಾಡುವ ಕೆಲಸ ಏನು? ಸರ್ಕಾರದ ನೀತಿ ಏನು? ಇದು ಅಧಿಕಾರಿಗಳ ರಾಜ್ಯವೋ ಇಲ್ಲ ಪ್ರಜಾಪ್ರಭುತ್ವದ ರಾಜ್ಯವೋ. ಮನಸ್ಸು ನೊಂದು ನಾನು ಈ ಮಾತು ಹೇಳುತ್ತಿದ್ದೇನೆ. ಅದೂ ಅಲ್ಲದೆ, ನಮ್ಮ ವಿರೋಧಿಗಳನ್ನು ಅಲ್ಲಿ ಆತಿಥಿಗಳಾಗಿ ಕರೆದುಕೊಂಡು ಸಮಾರಂಭ ಮಾಡುವುದು ಸರ್ಕಾರ ಯಾವ ರೀತಿ ನಿಯಮ ಪಾಲನೆ ಮಾಡಬೇಕಾಗಿದೆ? ಸಚಿವರನ್ನು ನೇರವಾಗಿ ನಾವು ಟೀಕೆ ಮಾಡುವುದಲ್ಲ. ಮಂತ್ರಿಗಳು ಪ್ರಜಾತಂತ್ರದ ನೀತಿಗೆ ಬದ್ಧರಾಗಿದ್ದಾರೆ, ಮಂತ್ರಿಗಳೂ ಶಾಸಕರಿಗೂ ಸಂಬಂಧ ಇದೆ. ಆದರೆ ಆಡಳಿತ ಶಾಹಿ ಈ ರೀತಿ ಮಾಡುತ್ತಿರುವುದು ಪ್ರಜಾಪ್ರಭುತ್ವದ ಮೌಲ್ಯಗಳಿಗೆ ಬೆಲೆ ಇಲ್ಲವೆಂದು ಹೇಳುತ್ತಿದ್ದೇನೆ. ಇದರ ಬಗ್ಗೆ ಸರ್ಕಾರ ಕಠಿಣವಾದ ನಿಲುವುಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಇದೇ ರೀತಿ ಮುಂದುವರಿದರೆ ಆಡಳಿತಕ್ಕಾಗಿ ಈ ರಾಜ್ಯವನ್ನು ಆಳುತ್ತಿದ್ದಾರೆಯೇ? ಹೊರತು ಪ್ರಜಾಪ್ರಭುತ್ವದ ರಾಜ್ಯವಾಗುವುದಿಲ್ಲವೆಂದು ಹೇಳುತ್ತ, ಈ ರಾಜ್ಯದಲ್ಲಿ ಮಂತ್ರಿಗಳು ಸಂಚಾರ ಮಾಡಲಿ,ಯಾವುದೇ ಸಮಾರಂಭ ಮಾಡಲಿ, ಆಯಾಕ್ಷೇತ್ರದ ಶಾಸಕರು ಅಧ್ಯಕ್ಷತೆ ವಹಿಸಬೇಕು. ಮತ್ತು ಶಾಸಕರ ಗಮನಕ್ಕೆ ತರದೆ ಪ್ರವಾಸ ಮಾಡುವುದು ಯೋಗ್ಯವಾದ ವಿಚಾರವಲ್ಲ ಎಂಬುದನ್ನು ತಮ್ಮ ಗಮನಕ್ಕೆ ತರುತ್ತೇನೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಮಾನ್ಯ ಅಧ್ಯಕ್ಷರೇ, ಮನಸ್ಸಿಗೆ ಬಂದ ಹಾಗೆ ಸಚಿವರು ಟೂರ್ ಹಾಕಿಕೊಂಡು ಹೋಗುತ್ತಾರೆ. ಇದೇನು ಮರ್ಯಾದೆ ಇಲ್ಲದ ಕೆಲಸ. ಬಂಗಾರಪ್ಪನವರ ಕಾಲದಲ್ಲಿ ಈ ರೀತಿ ಮಾಡಿದ್ದಿಲ್ಲ.

(ಗೊಂದಲ)

ಶ್ರೀ ಬಿ.ಹೆಚ್.ಬನ್ನಿಕೋಡ್ : ಅಧ್ಯಕ್ಷರೇ, ಯಾವಾಗ ನಾವು ನಿಂತರೂ ತಮ್ಮ ಹಕ್ಕುಗಳನ್ನು ನೀವು ಮೊಟಕು ಮಾಡುವಂತಹ ಕೆಲಸ ಮಾಡಿದರೆ ನಾವು ಹೇಗೆ ಕೆಲಸ ಮಾಡಬೇಕು.

ಅಧ್ಯಕ್ಷರು : ಬನ್ನಿಕೋಡ್‌ರವರೇ, ತಾವು ಅರ್ಥಮಾಡಬೇಕು. ಕುಡಿಯುವ ನೀರಿನ ಬಗ್ಗೆ ಕಳಿಸಿದವರು ಕೇವಲ 3 ಜನರಿದ್ದರು, ನಾನು ಎಲ್ಲರಿಗೂ ಆಸ್ಪದ ಮಾಡಿಕೊಟ್ಟೆ. ರಾಜ್ಯದ ಹಿತದೃಷ್ಟಿಯಿಂದ ನಾನು ಅವಕಾಶ ಮಾಡಿಕೊಟ್ಟಿದ್ದೇನೆ. ಪ್ರತಿಯೊಬ್ಬರೂ ಇದರ ಬಗ್ಗೆ ಮಾತನಾಡುತ್ತೇವೆ ಎಂದರೆ ಕಾಲಾವಕಾಶವಿಲ್ಲ. ಬೇರೆ ವಿಷಯಗಳಲ್ಲಿ ಪ್ರಸ್ತಾಪ ಮಾಡುವುದು ತಮಗೆ ಬರುತ್ತದೆ. ಈಗ ಸಚಿವರು ಟೂರ್ ಮಾಡುವ ಬಗ್ಗೆ ಹೇಳುತ್ತಾರೆ. ನಾವು ಕೇಳಬೇಕು.

ಶ್ರೀ ಹಾರನಹಳ್ಳಿ ರಾಮಸ್ವಾಮಿ : ಸಂಪ್ರದಾಯವಿದೆ ನಿಯಮವಿದೆ ಯಾವ ಕ್ಷೇತ್ರದಲ್ಲಿ ಸರ್ಕಾರಿ ಕಾರ್ಯಕ್ರಮಗಳಿದೆಯೋ ಅಲ್ಲಿ ಆಯಾ ಶಾಸನಸಭಾ ಸದಸ್ಯರು ಯಾವುದೇ ಪಕ್ಷ ಇರಲಿ ಅವರನ್ನು ಸಭೆಗೆ ಗೌರವಾನ್ವಿತವಾಗಿ ಕರೆಯಿಸಿ ಮುಖ್ಯ ಅತಿಥಿಗಳನ್ನಾಗಿಯೋ ಅಥವಾ....

12.15 ಪಿ.ಎಂ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಇಡೀ ಕ್ಷೇತ್ರದಲ್ಲಿ ಅಗೌರವ ಮಾಡಿದ್ದೀರಿ. ನನಗೇ ಅಗೌರವವಾಗಿದೆ.

(ಗೊಂದಲ)

ಅಧ್ಯಕ್ಷರು : ತಾವು ಕುಳಿತುಕೊಂಡು ಕೇಳಿ. ನಿಮಗೆ ನಾನು ಅವಕಾಶ ಕೊಡುತ್ತೇನೆ. ಅವರು ಹೇಳುವವರೆಗೂ ನೀವು ಕೇಳುವ ಸೌಜನ್ಯ ಇಲ್ಲದಿದ್ದರೆ ನಾನು ಇದನ್ನು ಇಲ್ಲಿಗೆ ಕ್ಲೋಸ್ ಮಾಡಿಬಿಡುತ್ತೇನೆ. ತಾವು ಕುಳಿತುಕೊಳ್ಳಿ. ಅವರು ಹೇಳುವುದು ಕೇಳಿದ ನಂತರ ನಾನು ಆಸ್ಪದ ಮಾಡಿಕೊಡುತ್ತೇನೆ. ಅವರಿಗೆ ಉತ್ತರ ಕೊಡುವುದಕ್ಕೆ ಅವಕಾಶ ಮಾಡಿಕೊಡದಿದ್ದರೆ ನಾನು ಈ ಮ್ಯಾಟರ್ ಅನ್ನು ಕ್ಲೋಸ್ ಮಾಡಿಬಿಡುತ್ತೇನೆ. ತಾವು ದಯವಿಟ್ಟು ಕುಳಿತುಕೊಳ್ಳಿ. ನಾನು ನಿಮಗೆ ಆಸ್ಪದ ಕೊಡುತ್ತೇನೆ. ನಾನು ನಿಮ್ಮ ಸಲುವಾಗಿಯೇ ಇದ್ದೇನೆ.

ಶ್ರೀ ಹಾರನ ಹಳ್ಳಿ ರಾಮಸ್ವಾಮಿ : ಮಾನ್ಯ ಅಧ್ಯಕ್ಷರೇ, ನಾನು ಏತಕ್ಕೆ ಆ ಮಾತನ್ನು ಹೇಳಿದೆ ಎಂದರೆ ಕೆಲವು ಶಾಸಕರು ನಾವು ಉದ್ಘಾಟನೆ ಮಾಡುವುದಿಲ್ಲ, ಯಾವುದೋ ಒಂದು ಕಟ್ಟಡವನ್ನು ಉದ್ಘಾಟನೆ ಮಾಡಬೇಕಾಗುತ್ತದೆ. ಅಧ್ಯಕ್ಷತೆ ಬೇರೆಯವರನ್ನು ಮಾಡಿಸಿ, ನಾನು ಉದ್ಘಾಟನೆ ಮಾಡುತ್ತೇನೆ ಎಂದು ಹೇಳುತ್ತಾರೆ. ಅಂಥ ಸಂದರ್ಭದಲ್ಲಿ ಆ ಶಾಸಕರನ್ನು ಆ ಸ್ಥಳದಲ್ಲಿಯೇ ಅವರ ಅಭಿಪ್ರಾಯದಂತೆ ಮಾಡುತ್ತಾರೆ. ಆದರೆ ಶಾಸಕರನ್ನು ಬಿಟ್ಟು ಸಾರ್ವಜನಿಕ ಸರ್ಕಾರಿ ಕಾರ್ಯಕ್ರಮಗಳನ್ನು ಮಾಡತಕ್ಕಂಥ ಪ್ರಶ್ನೆ ಇಲ್ಲ. ಅದಕ್ಕೋಸ್ಕರ ಶ್ರೀಮಾನ್ ನಾಯಕ್‌ರವರು ಎತ್ತಿದಂಥ ಪ್ರಶ್ನೆ ಯೋಗ್ಯವಾದಂಥದ್ದು ಇದೆ. ಅವರು ಲಲಿತಾಕಲಾ ಅಕಾಡೆಮಿ ಇರಬಹುದು, ಸಂಗೀತ ನಾಟಕ ಅಕಾಡೆಮಿ ಈ ರೀತಿ ಅಕಾಡೆಮಿಗಳು ಏನಿವೆ,

ಅವುಗಳನ್ನು ಗ್ರಾಮಾಂತರ ಪ್ರದೇಶದಲ್ಲಿ ಕ್ಷೇತ್ರದಲ್ಲಿ ಮಾಡಿದರೆ ಆಯಾ ಶಾಸಕರನ್ನು ಅದಕ್ಕೆ ಸೇರಿಸಿಕೊಂಡು ಮಾಡಬೇಕು ಎನ್ನುವ ಸೂಚನೆಯನ್ನು ನಾವು ಈಗ ಕಳುಹಿಸುತ್ತಿದ್ದೇವೆ. ಅಧ್ಯಕ್ಷತೆ ವಹಿಸಿ ಎಂದು ಕಳುಹಿಸುತ್ತಿದ್ದೇವೆ. ನಿಯಮಗಳ ಪ್ರಕಾರ ನಿಯಮ ಏನಿದೆಯೋ ಆ ಪ್ರಕಾರ ಅವರಿಗೆ ಕರೆದು ಗೌರವ ಕೊಡಬೇಕು ಎನ್ನುವ ಸೂಚನೆ ನಾನು ಕೊಡುತ್ತೇನೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ನಿಯಮ ಏನಿದೆ ಸ್ವಾಮಿ?

ಶ್ರೀ ಹಾರನಹಳ್ಳಿ ರಾಮಸ್ವಾಮಿ : ನಾನು ನೋಡಿಲ್ಲ. ಬೇಕಾದರೆ ತರಿಸಿ ಹೇಳುತ್ತೇನೆ. ನಮ್ಮ ಅಧಿಕಾರ ವರ್ಗದವರನ್ನು ಕರೆದು ಕೇಳಿದೆ. ಶಾಸಕರನ್ನು ಪ್ರತಿಯೊಂದು ಸರ್ಕಾರಿ ಸಮಾರಂಭಗಳಲ್ಲೂ ಕರೆದು ಅಧ್ಯಕ್ಷತೆ ವಹಿಸಬೇಕು ಎಂದು ಇದೆ.

(ಗೊಂದಲ)

ಶ್ರೀ ಬಿ.ಹೆಚ್.ಬನ್ನಿಕೋಡ್ : ಎಂ.ಎಲ್.ಸಿ. ಗಳ ಬಗ್ಗೆ ಏನು ಹೇಳುತ್ತೀರಿ? ಶಿಕ್ಷಕರ ಕ್ಷೇತ್ರ.

(ಗೊಂದಲ)

ಶ್ರೀ ಹಾರನಹಳ್ಳಿ ರಾಮಸ್ವಾಮಿ : ಎಲ್ಲಾ ಮಂತ್ರಿಗಳಿಗೆ ಈ ಸೂಚನೆಯನ್ನು ತಿಳಿಸುತ್ತೇನೆ. ನಾನು ಹೇಳುವುದಕ್ಕೆ ಅವಕಾಶ ಕೊಡದಿದ್ದರೆ ಏನು ಹೇಳುವುದು? ಶ್ರೀಮಾನ್ ಮಹದೇವ್‌ರವರು ಮತ್ತೊಂದು ಪ್ರಾಮುಖ್ಯವಾದ ಪ್ರಶ್ನೆಯನ್ನು ಎತ್ತಿದರು. ಶಾಸಕರನ್ನು ಬಿಟ್ಟು ಅಧಿಕಾರಿಗಳೇ ಸಮಾರಂಭವನ್ನು ಏರ್ಪಡಿಸುತ್ತಾರೆ. ಇದು ಬಹಳ ತಪ್ಪು. ಈಗತಾನೇ ಅದಕ್ಕೆ ಒಂದು ಸರ್ಕ್ಯುಲರ್ ಹೊರಡಿಸಿದೆ. ಯಾವ ಅಧಿಕಾರಿವರ್ಗದವರು ಸರ್ಕಾರಿ ಸಮಾರಂಭದ ಅಧ್ಯಕ್ಷತೆ ವಹಿಸುವುದಾಗಲಿ ಉದ್ಘಾಟನೆ ಮಾಡುವುದಾಗಲಿ ಮಾಡಬಾರದು. ಆಯಾಕ್ಷೇತ್ರದ ಶಾಸಕರಿಂದ ಮಾಡಿಸಬೇಕು. ಈ ರೀತಿ ಯಾರಾದರೂ ಅಧಿಕಾರಿ ವರ್ಗದವರು ಈ ನಿಯಮವನ್ನು ಈ ಸರ್ಕಾರಿ ಸೂಚನೆಯನ್ನು ಉಲ್ಲಂಘಿಸಿದರೆ ಅವರ ಮೇಲೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

(ಗೊಂದಲ)

ಅಧ್ಯಕ್ಷರು : ಮಾಧುಸ್ವಾಮಿ ಅವರೇ ಹೇಳಿ, ನಿಮಗೆ ಛಾನ್ಸ್ ಕೊಡುತ್ತೇನೆ ಕುಳಿತುಕೊಳ್ಳಿ. ಅವರು ನನ್ನ ಗಮನ ಸೆಳೆದಿದ್ದಾರೆ. ತಾವು ಈಗ ಕೇಳಿದ್ದೀರಿ. ನಂತರ ಛಾನ್ಸ್ ಕೊಡುತ್ತೇನೆ.

(ಗೊಂದಲ)

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೇ ...

(ಗೊಂದಲ)

ಅಧ್ಯಕ್ಷರು : ಶೂನ್ಯ ವೇಳೆ ಮುಕ್ತಾಯವಾಯಿತು. ಗಮನ ಸೆಳೆಯುವ ಸೂಚನೆ. ಶ್ರೀಮತಿ ಮೋಟಮ್ಮನವರು.

ಶ್ರೀ ಜೆ.ಸಿ. ಮಾಧುಸ್ವಾಮಿ : ತಾವು ನನ್ನನ್ನು ಕರೆದಿದ್ದಿರಿ ಸಾರ್.

ಅಧ್ಯಕ್ಷರು : ಈ ರೀತಿಯಾದರೆ ನನಗೆ ಕಂಡಕ್ಟ್ ಮಾಡುವುದಕ್ಕಾಗುವುದಿಲ್ಲ. ತಾವು ಕುಳಿತುಕೊಳ್ಳಬೇಕು.

(ಗೊಂದಲ)

ಶ್ರೀ ಜೆ.ಸಿ. ಮಾಧುಸ್ವಾಮಿ : ನನ್ನನ್ನು ನಾಗಮಂಗಲದ ಕ್ಷೇತ್ರದ ಶಾಸಕ ಎಂದು ಹೇಳಿದರೆ ಹೇಗೆ? ತಾವು ನನ್ನ ರಕ್ಷಣೆಗೆ ಬರಬೇಕು. ನನ್ನ ಸ್ಥಿತಿ ಏನು ಅಲ್ಲಿ.

(ಗೊಂದಲ)

ಶ್ರೀಮತಿ ಮೋಟಮ್ಮ : ಮಾನ್ಯ ಅಧ್ಯಕ್ಷರೇ, ಮೂಡಿಗೆರೆ ವಿಧಾನಸಭಾ ಕ್ಷೇತ್ರದ ಹಲವಾರು ಕಡೆಗಳಲ್ಲಿ ಕುಡಿಯುವ ನೀರಿನ ಅಭಾವದಿಂದಾಗಿ ....

(ಗೊಂದಲ)

Sri. Azzez Sait : I have a clarification to ask to Mr. Ramaswamy, Hon'ble Minister for Parlimentary Affairs. ಅವರು ನಾನು 1960 ನೇ ಇಸವಿಯಿಂದ ಮೇಲ್ಮನೆಯಲ್ಲಿ ಮತ್ತು ಈ ಮನೆಯಲ್ಲಿ ಬಂದಿದ್ದೇವೆ. ಇವತ್ತು ಎಲ್ಲಾ ಶಾಸಕರನ್ನು ಇನ್‌ವಾಲ್ವ್ ಮಾಡಬೇಕು ಎಂದು ಅವರು ಉತ್ತರ ಕೊಟ್ಟಿದ್ದು ನನಗೆ ಬಹಳ ಆಶ್ಚರ್ಯವಾಗುತ್ತಿದೆ. ಇನ್ನು ಮೇಲೆ ಒಂದು ಸರ್ಕ್ಯುಲರನ್ನು ಕಳುಹಿಸುತ್ತೇವೆ. ಮಾನ್ಯ ನಿಜಲಿಂಗಪ್ಪನವರ ಕಾಲದಿಂದಲೂ ಇದು ಬಂದಿದೆ. ಈ ಶಾಸಕರಿಗೆ ಅವರವರ ಕ್ಷೇತ್ರದಲ್ಲಿ ಯಾವುದಾದರೂ ಸಭೆಗಳು ಆದರೆ ಅವರಿಗೆ ಒಂದು ಮಾನ್ಯತೆ ಕೊಡಬೇಕು ಎಂದು. ನಿಜಲಿಂಗಪ್ಪನವರ ಕಾಲದಲ್ಲಿ ಆಗಿದೆ. ಇವತ್ತು ಹಾರ್ನಳ್ಳಿ ರಾಮಸ್ವಾಮಿ, ಇನ್ನು ಮುಂದೆ ಕಳುಹಿಸುತ್ತೇವೆ ಎಂದು ಹೇಳುತ್ತಾರೆ. ಹಾಗಾದರೆ ಈ ಹಿಂದೆ ಮಾಡಿದ ನಿಯಮಗಳೆಲ್ಲಾ ಹೋಯಿತೇ? ಶಾಸಕರಿಗೆ ಮರ್ಯಾದೆ, ಗೌರವ, ಘನತೆ, ಅವರ ಕ್ಷೇತ್ರದಲ್ಲಿ ಬೇಡವೇ? ಮಂತ್ರಿಗಳು ಟೂರ್ ಪ್ರೋಗ್ರಾಂ ಬಂದ ಮಾರನೆಯ ದಿವಸ ಶಾಸಕರ ಗಮನಕ್ಕೆ ಬರುತ್ತದೆ. ಮಾತನಾಡಬೇಕಾದರೆ ಏನಾದರೂ ಸ್ವಲ್ಪ ಮಿತಿ ಇರಬೇಕು. ವಿಧಾನ ಪರಿಷತ್‌ನಲ್ಲಿ 1960 ಇಸವಿಯಿಂದ ನಾನೂ ಸಹ ಅವರ ಜೊತೆ ಇದ್ದೇನೆ. ಈ ರೀತಿ ಯಾವೊತ್ತೂ ಸಹ ನಡೆದಿಲ್ಲ, ಈಗ ದಿಕ್ಕೆಟ್ಟು ನಡೆಯುತ್ತಿದೆ.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ (ಕಾನೂನು ಸಚಿವರು) : ಮಾನ್ಯ ಅಧ್ಯಕ್ಷರೆ, ಇದಕ್ಕೆ ಹೊಸ ನಿಯಮ ಇದೆಯೆಂದು ನಾನು ಹೇಳಲಿಲ್ಲ. ದಿನಾಂಕ 8-2-1985 ರಂದು ಈ ಆದೇಶವನ್ನು ಹೊರಡಿಸಲಾಗಿದೆ. ಆದೇಶದ ಪ್ರಕಾರ ಸರ್ಕಾರಿ ಇಲಾಖೆಗಳು ಏರ್ಪಡಿಸುವಂಥ ಸರ್ಕಾರಿ ಸಮಾರಂಭಗಳಲ್ಲಿ ಚುನಾವಣಾ ಕ್ಷೇತ್ರವನ್ನು ಪ್ರತಿನಿಧಿಸುವ ಸಂಸತ್ ಸದಸ್ಯರು ಮತ್ತು ವಿಧಾನ ಸಭಾ ಹಾಗೂ ವಿಧಾನ ಪರಿಷತ್ ಸದಸ್ಯರನ್ನು ತಪ್ಪದೆ ಆಹ್ವಾನಿಸಬೇಕು. ಈ ಆಜ್ಞಾನುಸಾರ 75 ರಲ್ಲಿ ತಿಳಿಸಿದಂತೆ ಆಸನಗಳ ವ್ಯವಸ್ಥೆಯನ್ನು ಮಾಡಬೇಕು. ಸಮಾರಂಭದಲ್ಲಿ ಪಾಲ್ಗೊಳ್ಳುವಂಥ ಸಂದರ್ಭ ಮತ್ತು ಇತರ ಸನ್ನಿವೇಶಗಳನ್ನಾಧರಿಸಿ ಮಂತ್ರಿ, ರಾಜ್ಯ ಮಂತ್ರಿ, ಸಂಸತ್ ಮತ್ತು ರಾಜ್ಯ ವಿಧಾನ ಮಂಡಲದ ಸದಸ್ಯರುಗಳಿಗೆ ಅಧ್ಯಕ್ಷರು, ಮುಖ್ಯ ಅತಿಥಿ, ವಿಶೇಷ ಆಹ್ವಾನಿತರು ಹೀಗೆ ಆಸನಗಳನ್ನು ನೀಡಬೇಕು. ಅಲ್ಲದೆ, ಅವರ ಹೆಸರುಗಳನ್ನು ಆಹ್ವಾನ ಪತ್ರಿಕೆಯಲ್ಲಿ ಹಾಕಿಸಬೇಕು. ಈ ಸೂಚನೆಯನ್ನು ಎಲ್ಲಾ ಇಲಾಖೆಗಳು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು. ಈ ಆಜ್ಞೆ ಈಗಲೂ ಕೂಡ ಜಾರಿಯಲ್ಲಿದೆ.

ಶ್ರೀ ಬಿ.ಹೆಚ್. ಬನ್ನಿಕೋಡ್ : ಸ್ವೇಚ್ಛಾಚಾರದಿಂದ ವರ್ತಿಸುತ್ತಿರತಕ್ಕಂಥ ಸಚಿವರು ಮತ್ತು ಅಧಿಕಾರಿಗಳ ಮೇಲೆ ಏನು ಕ್ರಮ ಕೈಗೊಳ್ಳುತ್ತೀರಿ?